MARCH 22, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಕಳೆದ ಸಾಲಿನ ಬಜೆಟ್ ಗಾತ್ರಕ್ಕಿಂತ, ಪ್ರಸಕ್ತ ಆಯವ್ಯಯ, ಶೇಕಡ 10 ದಶಾಂಶ 3 ರ ಷ್ಟು ಬೆಳವಣಿಗೆ ಕಂಡಿದೆ – ಮುಖ್ಯಮಂತ್ರಿ ಸಿದ್ದರಾಮಯ್ಯ.**

- **ಕಾವೇರಿ ನದಿ ಮಾಲಿನ್ಯ ಹಾಗೂ ನದಿ ಪಾತ್ರಗಳ ಒತ್ತುವರಿ ಅಧ್ಯಯನಕ್ಕೆ, ತಜ್ಞರ ಸಮಿತಿ ರಚನೆ – ಸಚಿವ ಡಿ.ಕೆ. ಶಿವಕುಮಾರ.**

- **ಹುಬ್ಬಳ್ಳಿಯ ಕಿಮ್ಸ್ ಆರ್.ಐ. ಸಂಯೋಜಿತ, ಬಹುವಿಧ ಸಂಶೋಧನಾ ಘಟಕಕ್ಕೆ, ಕೇಂದ್ರದಿಂದ ಅಭಿನಂದನೆ.**
- **'ಹಿಮ ನದಿಗಳ ಸಂರಕ್ಷಣೆ' ಧ್ಯೇಯದೊಂದಿಗೆ; ಇಂದು ವಿಶ್ವ ಜಲ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಸಕ್ತ ಆರ್ಥಿಕ ವರ್ಷಕ್ಕೆ, 4 ಲಕ್ಷ 9 ಸಾವಿರದ 549 ಕೋಟಿ ರೂಪಾಯಿ, ಆಯವ್ಯಯವನ್ನು ತಾವು ಮಂಡಿಸಿದ್ದು, ಕಳೆದ ಸಾಲಿನ ಬಜೆಟ್ ಗಾತ್ರಕ್ಕಿಂತ, ಶೇಕಡ 10 ದಶಾಂಶ 3 ರ ಷ್ಟು ಬೆಳವಣಿಗೆ ಕಂಡಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ವಿಧಾನಸಭೆಯಲ್ಲಿ, ಕರ್ನಾಟಕ ಧನ ವಿನಿಯೋಗ ವಿಧೇಯಕ–2025ಕ್ಕೆ ಅನುಮೋದನೆ ನೀಡುವಂತೆ ಸದನವನ್ನು, ಕೋರಿದರು. ಈ ಬಾರಿಯ ಬಜೆಟ್, ದೇಶದಲ್ಲೇ 5ನೇ ದೊಡ್ಡ ಬಜೆಟ್ ಆಗಿದೆ. 8 ಸಾವಿರ ಕೋಟಿ ರೂಪಾಯಿಗಳಷ್ಟು ರಾಜಸ್ವ ಸಂಗ್ರಹದಲ್ಲಿ ಕೊರತೆಯಾಗಲಿದೆ. 51 ಸಾವಿರದ 34 ಕೋಟಿ ರೂಪಾಯಿಗಳನ್ನು, ಪಂಚ ಖಾತ್ರಿ ಯೋಜನೆಗಳಿಗೆ ನೀಡಿದ್ದಾಗಿ, ಮುಖ್ಯಮಂತ್ರಿ ತಿಳಿಸಿದರು.**

<><><>

**ಪ್ರತಿಪಕ್ಷಗಳ ಧರಣಿ, ಗದ್ದಲದ ನಡುವೆ, ಮುಖ್ಯಮಂತ್ರಿ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿದ ನಂತರ, ಉಭಯ ಸದನಗಳನ್ನು ಅನಿರ್ಧಿ ಷ್ಟಾವಧಿಗೆ, ಮುಂದೂಡಲಾಯಿತು.**

<><><>

ವಿಧಾನಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ ಹಿನ್ನೆಲೆ, 18 ಬಿಜೆಪಿ ಶಾಸಕರನ್ನು 6 ತಿಂಗಳ ಮಟ್ಟಿಗೆ ಅಮಾನತು ಮಾಡಿ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಆದೇಶ ಹೊರಡಿಸಿದರು.

<><><>

ಕಾವೇರಿ ನದಿ ಮಾಲಿನ್ಯ ಅಧ್ಯಯನ ಹಾಗೂ ನದಿ ಪಾತ್ರಗಳ ಒತ್ತುವರಿ ತಡೆಯಲು ತಜ್ಞರ ಸಮಿತಿ ರಚಿಸುವುದಾಗಿ, ಜಲ ಸಂಪನ್ಮೂಲ ಖಾತೆ ಸಚಿವ, ಡಿ.ಕೆ. ಶಿವಕುಮಾರ, ಹೇಳಿದ್ದಾರೆ. ಕೊಡಗು ಜಿಲ್ಲೆ, ಭಾಗ ಮಂಡಲದ, ತಲಕಾವೇರಿ ಕ್ಷೇತ್ರಕ್ಕೆ ಭೇಟಿ ನೀಡಿ, ವಿಶ್ವ ಜಲ ದಿನದ ಹಿನ್ನೆಲೆ, ಇಂದಿನಿಂದ ಒಂದು ವಾರ, ಜಲ ಸಂರಕ್ಷಿಸಿ ಅಭಿಯಾನದಲ್ಲಿ ಪಾಲ್ಗೊಳ್ಳುವುದಾಗಿ ಅವರು ತಿಳಿಸಿದರು.

<><><>

ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್, ಪೆನ್ನಾರ್ ನದಿ ನೀರು ಹಂಚಿಕೆ ವಿಷಯವಾಗಿ, ಇಂದು ಸಭೆ ಕರೆದಿದ್ದು, ರಾಜ್ಯದ ಪ್ರತಿನಿಧಿಯಾಗಿ ತಾವು ಪಾಲ್ಗೊಳ್ಳುವುದಾಗಿ, ಬಳಿಕ ಅಲ್ಲಿ ಕಾವೇರಿ ನದಿಗೆ ನಮನ ಸಲ್ಲಿಸುವುದಾಗಿ, ಹೇಳಿದರು.

<><><>

ಇಂದು ಕನ್ನಡಪರ ಸಂಘಟನೆಗಳು, ಕರೆ ನೀಡಿರುವ ಕರ್ನಾಟಕ ಬಂದ್, ಪುನರ್ ಪರಿಶೀಲಿಸುವಂತೆ ಮನವಿ ಮಾಡಿದ ಅವರು, ರಾಜ್ಯ ಸರ್ಕಾರ ಕನ್ನಡ ನಾಡು–ನುಡಿ, ನೆಲ, ಜಲ ಸಂರಕ್ಷಣೆಗೆ ಬದ್ಧವಾಗಿದೆ. ಬಂದ್ ಅನಗತ್ಯ ಎಂದರು.

<><><>

ಬಿಜೆಪಿ ಅಧಿಕಾರದಲ್ಲಿದ್ದಾಗ ಆರಂಭಿಸಿದ, ರಾಜ್ಯದ ಯಾವುದೇ ವಿಶ್ವವಿದ್ಯಾಲಯವನ್ನು, ರಾಜ್ಯ ಸರ್ಕಾರ ಮುಚ್ಚುವುದಿಲ್ಲ; ಆರ್ಥಿಕ ಹೊರೆಯಿಂದಾಗಿ, ವಿಲೀನಗೊಳಿಸುವ ಚಿಂತನೆ ಇದೆ ಎಂದು, ಡಿ.ಕೆ.ಶಿವಕುಮಾರ, ಸುದ್ದಿಗಾರರಿಗೆ ಸ್ಪಷ್ಟಪಡಿಸಿದರು.

<><><>

ಬಳಿಕ, ಬೆಂಗಳೂರಿನಲ್ಲಿ ಜರುಗಿದ, ಕಾವೇರಿ ಆರತಿ ಕಾರ್ಯಕ್ರಮಕ್ಕೆ, ತಲ ಕಾವೇರಿ ಕ್ಷೇತ್ರದ ಪುಣ್ಯತೀರ್ಥವನ್ನು ಕೊಂಡೊಯ್ದು, ಪ್ರೋಕ್ಷಿಸಿ, ತಮ್ಮ ಶ್ರದ್ಧೆ ಪ್ರಕಟಿಸಿದರು.

<><><>

ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ –ಕಿಮ್ಸ್ ಆರ್.ಐ. ಸಂಯೋಜನೆಯ, ಬಹುವಿಧ ಸಂಶೋಧನಾ ಘಟಕಕ್ಕೆ, ಕೇಂದ್ರದ ಆರೋಗ್ಯ ಸಂಶೋಧನಾ ಸಂಸ್ಥೆಯ, ಮಹಾ ನಿರ್ದೇಶಕರು, ಅಭಿನಂದನಾ ಪ್ರಮಾಣ ಪತ್ರ ನೀಡಿ, ಗೌರವಿಸಿದ್ದಾರೆ. ಹೊಸದಿಲ್ಲಿಯ ಭಾರತ ಮಂಟಪಂನಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ, ಸಂಸ್ಥೆಯ ಪರವಾಗಿ, ಬಹುವಿಧ ಸಂಶೋಧನಾ ಘಟಕದ ನೋಡಲ್ ಅಧಿಕಾರಿ ಹಾಗೂ ಜನರಲ್ ಮೆಡಿಸಿನ್ ವಿಭಾಗದ ಸಹ ಪ್ರಾಧ್ಯಾಪಕ ಡಾಕ್ಟರ್ ರಾಮ್ ಕೌಲಗುಡ್ಡ ಅವರಿಗೆ ನೀಡಿ ಗೌರವಿಸಲಾಯಿತು. ಪುರಸ್ಕಾರವನ್ನು ಸ್ವೀಕರಿಸಿ, ಪ್ರದೇಶ ಸಮಾಚಾರಕ್ಕಾಗಿ ಡಾಕ್ಟರ್ ರಾಮ್ ಕೌಲಗುಡ್ಡ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಡಾಕ್ಟರ್ ರಾಮ್ ಕೌಲಗುಡ್ಡ ಧ್ವನಿ 60 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಇಂದು ವಿಶ್ವ ಜಲ ದಿನ. 'ಹಿಮ ನದಿಗಳ ಸಂರಕ್ಷಣೆ' ಧ್ಯೇಯದೊಂದಿಗೆ, ಜಲ ಸಾಕ್ಷರತೆಯ ಬಗ್ಗೆ, ಜನ ಜಾಗೃತಿ ಮೂಡಿಸಲು, ನಾಡಿನಾದ್ಯಂತ ವಿಶೇಷ ಕಾರ್ಯಕ್ರಮಗಳು ಇಂದು ಆಯೋಜನೆಗೊಂಡಿವೆ. ಜಾಗತಿಕವಾಗಿ, ಸಿಹಿ ನೀರಿನ ಸಮರ್ಪಕ ಪೂರೈಕೆಯನ್ನು ನಿರ್ವಹಿಸುವಲ್ಲಿ, ಹಿಮ ನದಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಹವಾಮಾನ ಬದಲಾವಣೆಯಿಂದಾಗಿ, ಹಿಮ ನದಿಗಳ ಸಂರಕ್ಷಣೆಯ ತುರ್ತು ಅಗತ್ಯವನ್ನು, ಈ ದಿನ ಒತ್ತಿ ಹೇಳುತ್ತಿದೆ.

<><><>

ವಿಶ್ವ ಜಲ ದಿನದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಅನುಭವಿ ಜಲ ತಜ್ಞ, ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕು ನೀರ್ನಳ್ಳಿಯ ಮಲೆನಾಡು ಮಳೆ ಕೇಂದ್ರದ ರೂವಾರಿ, ಶಿವಾನಂದ ಕಳವೆ.

<><><>

ಶಿವಾನಂದ ಕಳವೆ ಧ್ವನಿ 60 ಸೆಕೆಂದುಗಳು

<><><>

ವಿಜಯಪುರದ ಐತಿಹಾಸಿಕ ಬಾವಿಗಳನ್ನು ಪುನರುಜ್ಜೀವಿತಗೊಳಿಸಲು, ಜಿಲ್ಲಾಧಿಕಾರಿ ಟಿ. ಭೂ ಬಾಲನ್ ಸಂಬಂಧಿತ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ವಿಶ್ವ ಜಲ ದಿನಾಚರಣೆ ಹಿನ್ನೆಲೆ, ವಾರ್ಡ್ ಸಂಖ್ಯೆ 20ರ 'ಬಡಿ ಬಾವಡಿ'ಯ ಸ್ವಚ್ಛತೆ ಹಾಗೂ ಕಲುಷಿತ ನೀರು ಸೇರದಂತೆ, ನಿತ್ಯ ಆ ಬಾವಿಯ ನೀರನ್ನು ಉದ್ಯಾನದ ಗಿಡಗಳಿಗೆ ನೀರುಣಿಸಲು ಬಳಸುವಂತೆ, ಅವರು ನಿರ್ದೇಶಿಸಿದರು. ಮಹಾ ನಗರ ಪಾಲಿಕೆ ಆಯುಕ್ತರ ನೇತೃತ್ವದಲ್ಲಿ, ಜಿಲ್ಲಾಡಳಿತದ ಪ್ರಮುಖ ಅಧಿಕಾರಿಗಳ ಕಚೇರಿಗಳ ಆವರಣದಲ್ಲಿರುವ, ಎಲ್ಲ ಬಾವಿಗಳ ಹೂಳನ್ನು ತೆರವುಗೊಳಿಸಿ, ದಿನ ಬಳಕೆಗೆ ವ್ಯವಸ್ಥೆಗೊಳಿಸುವಂತೆ, ತಿಳಿಸಿದರು.

<><><>

ಬೆಳಗಾವಿ ಜಿಲ್ಲೆ, ಚಿಕ್ಕೋಡಿಯನ್ನು ಪ್ರತ್ಯೇಕ ಜಿಲ್ಲೆಯಾಗಿ ಘೋಷಿಸುವಂತೆ, ಆಡಳಿತ ಪಕ್ಷದ ಶಾಸಕ, ಪ್ರಕಾಶ ಹುಕ್ಕೇರಿ, ವಿಧಾನ ಪರಿ ತ್ತಿನಲ್ಲಿ ಆಗ್ರಹಿಸಿದರು. ಆಯವ್ಯಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಚಿಕ್ಕೋಡಿಗೂ ಬೆಳಗಾವಿಗೂ 190 ಕಿಲೋ ಮೀಟರ್ ಅಂತರವಿದೆ. ಜನರು ಬೆಳಗಾವಿ ಜಿಲ್ಲಾ ಕೇಂದ್ರಕ್ಕೆ ಬರಲು ಸಾಕ ್ಟ ತೊಂದರೆ ಅನುಭವಿಸುತ್ತಿದ್ದಾರೆ ಎಂದರು.

<><><>

ಮಹಾರಾಷ್ಟ್ರ ಸರ್ಕಾರ, ಒಪ್ಪಂದದ ಪ್ರಕಾರ, ಕಲಮ್ಮವಾಡಿ ಅಣೆಕಟ್ಟೆಯಿಂದ 4 ಟಿ.ಎಂ.ಸಿ. ಅಡಿ ನೀರನ್ನು, ವೇದಗಂಗಾ ಮತ್ತು ದೂಧ್‌ಗಂಗಾ ನದಿಗಳಿಗೆ ಹರಿಸಲು, ರಾಜ್ಯ ಸರ್ಕಾರ ಕ್ರಮವಹಿಸಬೇಕು ಎಂದು, ಒತ್ತಾಯಿಸಿದರು.

<><><>

ಚಿಕ್ಕೋಡಿಯಲ್ಲೇ ಕ್ಯಾನ್ಸರ್ ಚಿಕಿತ್ಸಾ ಆಸ್ಪತ್ರೆಯನ್ನು ಸ್ಥಾಪಿಸುವಂತೆ, ಅವರು ಮನವಿ ಮಾಡಿದರು.

<><><>

ಕಲಬುರಗಿಗೆ ಕುಡಿಯುವ ನೀರು ಸರಬರಾಜು ಮಾಡುವ, ಭೀಮಾ ನದಿ ಬ್ಯಾರೆಜ್ ನಲ್ಲಿ, ಸಂಗ್ರಹಿತ ನೀರು ಕೆಳಮಟ್ಟದಾಗಿದ್ದು, ಸೂಪರ್ ಕ್ಲೋರಿನೇಶನ್ ಮಾಡಿ, ನೀರು ಸರಬರಾಜು ಮಾಡಲಾಗುತ್ತಿದೆ. ಆರೋಗ್ಯದ ಹಿತದೃಷ್ಟಿಯಿಂದ ಸಾರ್ವಜನಿಕರು ನೀರನ್ನು ಕಾಯಿಸಿ, ಆರಿಸಿ ಮತ್ತು ಸೋಸಿ ಕುಡಿಯಲು, ಕಾರ್ಯಪಾಲಕ ಅಭಿಯಂತರರು ಕೋರಿದ್ದಾರೆ.

<><><>

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ, ಸರ್ಕಾರಿ ವಸತಿ ನಿಲಯಗಳಲ್ಲಿ, ಅವ್ಯವಸ್ಥೆ ಗಮನಿಸಿದ್ದು, ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದು, ಕಾಲಮಿತಿಯಲ್ಲಿ ಸರಿ ಪಡಿಸಲು ಅಧಿಕಾರಿಗಳಿಗೆ ಅವಕಾಶ ನೀಡಿದ್ದಾಗಿ, ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ ತಿಳಿಸಿದ್ದಾರೆ. ಶಿವಮೊಗ್ಗದಲ್ಲಿ ವಿವಿಧೆಡೆ ಭೇಟಿ ನೀಡಿ, ಪರಿವೀಕ್ಷಣೆ ಕೈಗೊಂಡ ಅವರು, ಸಮಯಾವಕಾಶ ನೀಡಿದ್ದು, ಅಧಿಕಾರಿಗಳು ಸರಿ ಪಡಿಸುವ ವಿಶ್ವಾಸವಿದೆ. ತಪ್ಪಿದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದಾಗಿ, ಅವರು ಹೇಳಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕಲಬುರಗಿಯಲ್ಲಿ ಗರಿಷ್ಠ 39 ದಶಾಂಶ 6 ಡಿಗ್ರಿ ಸೆಲ್ಸಿಯಸ್, ಚಾಮರಾಜ ನಗರದಲ್ಲಿ ಕನಿಷ್ಠ 18 ದಶಾಂಶ 4 ಡಿಗ್ರಿ ತಾಪಮಾನ ದಾಖಲಾಗಿದೆ.

<><><>

ರಾಯಚೂರು ಜಿಲ್ಲೆ, ಕವಿತಾಳ ಗ್ರಾಮದ, ಗಣಕಯಂತ್ರ ತಂತ್ರಜ್ಞೆ ಹಾಗೂ ಪ್ರಗತಿಪರ ಕೃಷಿಕ ಮಹಿಳೆ, ಕವಿತಾ ಮಿಶ್ರಾ ಅವರಿಗೆ, ಧಾರವಾಡದ ಬೆಲ್ಲದ ಕೃಷಿ ಮತ್ತು ಶಿಕ್ಷಣ ಪ್ರತಿಷ್ಠಾನದ, 'ಕೃಷಿ ಸೇವಾ ಗೌರವ ಪ್ರಶಸ್ತಿ'ಯನ್ನು, ಕರ್ನಾಟಕ ವಿದ್ಯಾವರ್ಧಕ ಸಂಘ ಪ್ರಕಟಿಸಿದೆ.

<><><>

ಗದಗ ಜಿಲ್ಲೆ ಹುಲಕೋಟಿಯ, ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ, ಗೋಡಂಬಿ ಮತ್ತು ಕೊಕ್ಕೊ ಅಭಿವೃದ್ಧಿ ನಿರ್ದೇಶನಾಲಯದಿಂದ, ಗೋಡಂಬಿ ಬೆಳೆ ಕುರಿತ ವಿಚಾರ ಸಂಕಿರಣ ಜರುಗಿತು.

<><><>

ಶಾಲಾ, ಕಾಲೇಜುಗಳಲ್ಲಿ ಆಂತರಿಕ ದೂರು ನಿವಾರಣಾ ಸಮಿತಿಯನ್ನು ರಚಿಸಿ, ಮಾಹಿತಿಯನ್ನು SHE-Box ಜಾಲತಾಣಕ್ಕೆ, ಅಪ್ಲೋಡ್ ಮಾಡುವಂತೆ, ತುಮಕೂರು ಅಪರ ಜಿಲ್ಲಾಧಿಕಾರಿ ಎನ್. ತಿಪ್ಪೇಸ್ವಾಮಿ ಸೂಚಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕಳೆದ ಸಾಲಿನ ಬಜೆಟ್ ಗಾತ್ರಕ್ಕಿಂತ, ಪ್ರಸಕ್ತ ಆಯವ್ಯಯ, ಶೇಕಡ 10 ದಶಾಂಶ 3 ರ ಷ್ಟು ಬೆಳವಣಿಗೆ ಕಂಡಿದೆ – ಮುಖ್ಯಮಂತ್ರಿ ಸಿದ್ದರಾಮಯ್ಯ.

- ಕಾವೇರಿ ನದಿ ಮಾಲಿನ್ಯ ಹಾಗೂ ನದಿ ಪಾತ್ರಗಳ ಒತ್ತುವರಿ ಅಧ್ಯಯನಕ್ಕೆ, ತಜ್ಞರ ಸಮಿತಿ ರಚನೆ – ಸಚಿವ ಡಿ.ಕೆ. ಶಿವಕುಮಾರ.
- ಹುಬ್ಬಳ್ಳಿಯ ಕಿಮ್ಸ್ ಆರ್.ಐ. ಸಂಯೋಜಿತ, ಬಹುವಿಧ ಸಂಶೋಧನಾ ಘಟಕಕ್ಕೆ, ಕೇಂದ್ರದಿಂದ ಅಭಿನಂದನೆ.
- 'ಹಿಮ ನದಿಗಳ ಸಂರಕ್ಷಣೆ' ಧ್ಯೇಯದೊಂದಿಗೆ; ಇಂದು ವಿಶ್ವ ಜಲ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>